Under Ground Drainage ಯೋಜನೆಯಡಿ ಒಟ್ಟು 13 ಯೋಜನೆಗಳಿದ್ದು ಇವುಗಳ ಪೈಕಿ 9 ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಸದರಿ ಯೋಜನೆಗಳಿಗೆ ಈಗಾಗಲೇ ಟೆಂಡರ್ ಕರೆಯಲು ಅನುಮತಿ ನೀಡಿದ್ದು ಅದರಂತೆ ಮಂಡಳಿಯು ಟೆಂಡರ್ ಕರೆದು 20 ಕಾಮಗಾರಿಗಳ ಕೆಲಸ ನಿರ್ವಹಿಸಲಾಗುತ್ತಿದೆ. ಈಗ ಮಾನ್ಯ ಸದಸ್ಯರು ಅನೇಕ ಅವ್ಯವಹಾರಗಳು ನಡೆದಿದೆ, ಕಳಪೆ ಕಾಮಗಾರಿಗಳು ನಡೆದಿದೆ ಎಂದು ಹೇಳುತ್ತಿದ್ದಾರೆ. ಇದು ಬಹಳಷ್ಟು ಗಂಭೀರವಾದ ವಿಚಾರವಾಗಿರುವುದರಿಂದ ಇದಕ್ಕೆ ಅವರು ಸದನ ಸಮಿತಿ ನೇಮಿಸಿ ಎಂದು ಹೇಳಿದ್ದಾರೆ. ಅದು ಬೇಡ ಇದಕ್ಕೆ ಯಾರಾದರೊಬ್ಬರು Retired judge ರವರನ್ನು ನೇಮಕ ಮಾಡಿ ಈ ಬಗ್ಗೆ enquiry ಮಾಡಿಸಿ ಮುಂದೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇವೆ.

## 8) ಗಮನ ಸೆಳೆಯುವ ಸೂಚನೆಗಳು

### 1) ವಿಷಯ :– ಕೋಲಾರ ಜಿಲ್ಲೆಯಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಬಗ್ಗೆ.

**ಡಾ॥ ಎಂ.ಸಿ. ಸುಧಾಕರ್ (ಚಿಂತಾಮಣಿ) :–** ಮಾನ್ಯ ಛೇರ್ಮನ್‌ರವರೆ, ಕೋಲಾರ ಜಿಲ್ಲೆಯಲ್ಲಿ ಮರಳು ಸಾಗಾಣಿಕೆಯನ್ನು ನಿಷೇಧಿಸಿದ್ದರೂ ಸಹ, ಅಧಿಕಾರಿಗಳ ನೆರವಿನಿಂದ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

**ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :–** ಮಾನ್ಯ ಛೇರ್ಮನ್‌ರವರೆ,

ಅನಧಿಕೃತ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರದ ಆದೇಶ ಸಂಖ್ಯೆ : ಸಿಐ 05 ಎಂಎಂಎನ್ 2005 ದಿನಾಂಕ : 06–08–2005 ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಹಾಗೂ ಸಂಬಂಧಿಸಿದ ತಾಲ್ಲೂಕುಗಳ ತಹಸೀಲ್ದಾರ್‌ಗಳನ್ನು ಒಳಗೊಂಡಂತೆ ಜಿಲ್ಲಾ ಉಸ್ತುವಾರಿ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಉಸ್ತುವಾರಿ ಸಮಿತಿಯು ದಿನಾಂಕ : 17–11–2005 ರಂದು ನಡೆದ ಸಭೆಯಲ್ಲಿ ಕೋಲಾರ ಜಿಲ್ಲೆಯಲ್ಲಿ ಮರಳು ನಿಕ್ಷೇಪದ ಹರಾಜನ್ನು ಸಂಪೂರ್ಣವಾಗಿ ನಿಷೇಧಿಸಲು ತೀರ್ಮಾನವನ್ನು ಕೈಗೊಂಡಿರುತ್ತದೆ ಹಾಗೂ ಅನಧಿಕೃತ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಕಂದಾಯ ಇಲಾಖೆ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಂತೆ ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ, ಬಾಗೇಪಲ್ಲಿ, ಶಿಡ್ಲಘಟ್ಟ, ಗುಡಿಬಂಡೆ ತಾಲ್ಲೂಕುಗಳ ಮುಖ್ಯರಸ್ತೆಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಲಾಗಿದೆ.

ಅನಧಿಕೃತ ಮರಳು ಸಾಗಾಣಿಕೆಯನ್ನು ಮಾಡುತ್ತಿದ್ದ 1361 ವಾಹನಗಳಿಂದ 2005–06ನೇ ಸಾಲಿನಲ್ಲಿ ರೂ.66,93,000–00 ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ ಹಾಗೂ 96 ದೂರುಗಳನ್ನು ದಾಖಲಿಸಲಾಗಿದೆ ಮತ್ತು ಖಾಸಗಿ ಜಮೀನುಗಳಿಂದ ಅನಧಿಕೃತವಾಗಿ ಮರಳು ತೆಗೆಯುತ್ತಿದ್ದಂತಹ ಜಮೀನುದಾರರ ವಿರುದ್ಧ ನಿಯಮಾನುಸಾರ ಮೊಕದ್ದಮೆ ದಾಖಲು ಮಾಡಲಾಗಿರುತ್ತದೆ. 2006–07ನೇ ಸಾಲಿನಲ್ಲಿ ಫೆಬ್ರವರಿ 2007ರ ಅಂತ್ಯದವರೆವಿಗೂ ರೂ.38,22,530–00 ಗಳ ದಂಡವನ್ನು ವಸೂಲಿ ಮಾಡಲಾಗಿದೆ. ಈ ಪೈಕಿ, ಮುಖ್ಯವಾಗಿ ಚಿಂತಾಮಣಿ ತಾಲ್ಲೂಕಿನಲ್ಲಿ 2005–06ನೇ ಸಾಲಿನಲ್ಲಿ 257 ಲಾರಿಗಳನ್ನು ತಡೆದು, ರೂ.9,89 ಲಕ್ಷಗಳ ದಂಡವನ್ನು ಹಾಗೂ 2006–07ನೇ ಸಾಲಿನ ಫೆಬ್ರವರಿ 2007ರ ಅಂತ್ಯದವರೆಗೆ 25 ಲಾರಿಗಳನ್ನು ತಡೆದು ರೂ.2,20,530–00 ಗಳ ದಂಡವನ್ನು ವಸೂಲಿ ಮಾಡಲಾಗಿದೆ.

ದಿನಾಂಕ : 14–02–2006 ರಂದು ಚಿಕ್ಕಬಳ್ಳಾಪುರ ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಅನಧಿಕೃತ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಹಗಲು ಹೊತ್ತಿನಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು, ಗ್ರಾಮ ಲೆಕ್ಕಿಗರು, ಗ್ರಾಮ ಮಟ್ಟದಲ್ಲಿ ನಿಯಂತ್ರಿಸುವಂತೆ ಸೂಚಿಸಲಾಗಿರುತ್ತದೆ ಹಾಗೂ ರಾತ್ರಿ ಸಮಯದಲ್ಲಿ ಕಾವಲಿಗಾಗಿ ಕೆ.ಎಸ್.ಆರ್.ಪಿ. ಪೊಲೀಸ್ ತಂಡವನ್ನು ನಿಯೋಜಿಸುವಂತೆ ಕೋರಲಾಗಿರುತ್ತದೆ. ದಿನಾಂಕ : 23–06–2006 ರಂದು ನಡೆದ ಜಿಲ್ಲಾಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯ ಸಭೆಯಲ್ಲಿ ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು/ನಿಯಂತ್ರಿಸಲು ಗೌರಿಬಿದನೂರು, ಮುಳಬಾಗಿಲು ಹಾಗೂ ಚಿಂತಾಮಣಿ, ತಾಲ್ಲೂಕುಗಳಲ್ಲಿ ಒಂದು ಸಂಚಾರಿ ದಳವನ್ನು ರಚಿಸುವಂತೆ ತಹಸೀಲ್ದಾರ್‌ರವರಿಗೆ ಸೂಚಿಸಲಾಗಿರುತ್ತದೆ. ಅಲ್ಲದೇ ದಿನಾಂಕ : 12–03–2007 ರಂದು ಮಾನ್ಯ ಲೋಕಾಯುಕ್ತರ ಅಧ್ಯಕ್ಷತೆಯಲ್ಲಿ ಕೋಲಾರ ಜಿಲ್ಲೆಯಲ್ಲಿನ ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆಯ ಬಗ್ಗೆ ನಡೆದ ಸಭೆಯಲ್ಲಿ, ಜಿಲ್ಲೆಯಲ್ಲಿನ ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆಯನ್ನು ಒಂದು ತಿಂಗಳ ಅವಧಿಯೊಳಗಾಗಿ ತಡೆಗಟ್ಟಲು/ನಿರ್ಬಂಧಿಸಲು ಕ್ರಮ ತೆಗೆದುಕೊಳ್ಳುವಂತೆ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ ಮತ್ತು ತಹಸೀಲ್ದಾರ್‌ರವರಿಗೆ ಸೂಚಿಸಿರುತ್ತಾರೆ. ಅದರಂತೆ, ಕಂದಾಯ ಸಾರಿಗೆ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಜಂಟಿ ಕಾರ್ಯಾಚರಣೆಯನ್ನು ನಡೆಸಲಾಗುತ್ತಿದ್ದು, ಈಗಾಗಲೇ, ಗೌರಿಬಿದನೂರು ತಾಲ್ಲೂಕಿನ ತಿಪ್ಪಗಾನಹಳ್ಳಿಯಲ್ಲಿ ಇಲಾಖೆಯ ಅಧಿಸೂಚಿತ ಚೆಕ್‌ಪೋಸ್ಟ್ ಕಾರ್ಯನಿರ್ವಹಿಸುತ್ತಿದ್ದು, ಈಗ ತಾತ್ಕಾಲಿಕವಾಗಿ ಗೌರಿಬಿದನೂರಿನಲ್ಲಿ ಏಳು ಕಡೆ ತನಿಖಾ ಠಾಣೆಗಳನ್ನು ರಚಿಸಲಾಗಿದ್ದು,

ಗೌರಿಬಿದನೂರು ಕುರೂಡಿ, ಬೇವನಹಳ್ಳಿ, ಆರೋಡಿ, ಪೂಜಾರಿಹಳ್ಳಿ, ಮಂಚೇನಳ್ಳಿ, ಕಾಮಗಾನ ಹಳ್ಳಿ ಮತ್ತು ಹೊಸೂರು ಗ್ರಾಮಗಳ ಬಳಿ ಹಾಗೂ ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರದಲ್ಲಿ ಸಂಚಾರಿ ಗಸ್ತು ಪಡೆಗಳನ್ನು ರಚಿಸಲಾಗಿರುತ್ತದೆ.

ಕೋಲಾರ ಜಿಲ್ಲೆಯಲ್ಲಿ ಪ್ರಸ್ತುತ ಯಾವುದೇ ಮರಳು ಗುತ್ತಿಗೆಗಳನ್ನು ಮಂಜೂರು ಮಾಡುತ್ತಿಲ್ಲ ಹಾಗೂ ಅಕ್ರಮ ಮರಳು ಸಾಗಾಣಿಕೆ/ಗಣಿಗಾರಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರು ದಿನಾಂಕ : 09–03–2007ರ ತಮ್ಮ ಪತ್ರದಲ್ಲಿ ಕೋಲಾರ ಜಿಲ್ಲೆಯ ನದಿ ಪಾತ್ರಗಳಲ್ಲಿ ಮತ್ತು ನೀರಾವರಿ ಮೂಲ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ನಿಷೇಧಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

**ಡಾ॥ ಎಂ.ಸಿ. ಸುಧಾಕರ :–** ಮಾನ್ಯ ಛೇರ್ಮನ್‌ರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ 2005 ರಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ಮಾಣ ಮಾಡಿದ್ದೇವೆಂದು ಹೇಳುತ್ತಾರೆ. ದಯವಿಟ್ಟು ಇಲ್ಲಿರುವಂಥ ಎಲ್ಲಾ ಹಿರಿಯರು ಬರಬಹುದು. ಎಲ್ಲಿಯೂ ಒಂದು ಚೆಕ್‌ಪೋಸ್ಟ್‌ನ್ನು ಅವತ್ತಿನಿಂದ ಇವತ್ತಿನವರೆಗೆ ನಿರ್ಮಾಣ ಮಾಡಿಲ್ಲ. ಇವತ್ತು ಅಲ್ಲಿರತಕ್ಕಂಥ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕೆಲಸ ನಿರ್ವಹಿಸತಕ್ಕಂಥವರು ಜಿಲ್ಲೆಯಲ್ಲಿ 3–4 ಜನ ಮಾತ್ರ. ಒಂದು ಕಡೆ ಗೌರಿಬಿದನೂರಿಗೆ ಹೋಗಬೇಕು, ಇನ್ನೊಂದು ಕಡೆ ಚಿಂತಾಮಣಿಗೆ ಬರಬೇಕು, ಮತ್ತು ಮುಳಬಾಗಿಲು ಇಲ್ಲಿಗೆ ಹೋಗಬೇಕು. ಇಲ್ಲಿರುವ ಪೊಲೀಸ್ ಇಲಾಖೆಯವರಿಗೆ ಹೇಳಿದರೆ, ಅವರು ಯಾವುದೇ ರೀತಿಯಾದ ಕ್ರಮವನ್ನು ಜರುಗಿಸುತ್ತಿಲ್ಲ. ನಾನು ಹಿಂದೆ ಜಿಲ್ಲಾಧಿಕಾರಿಗಳಿಗೆ ಮತ್ತು IG ಮತ್ತು DG ಯವರಿಗೆ ಪತ್ರವನ್ನು ಬರೆದಿದ್ದೆ. ಇಂತಿಂಥ ವಾಹನಗಳು ಎಂದು ಅದರ ನೋಂದಣಿ ಸಂಖ್ಯೆ ಮತ್ತು ಹೆಸರನ್ನು ನಾನು ದಿನಾಂಕ : 6.5.2005 ರಲ್ಲಿ ಬರೆದು ಕೊಟ್ಟಿದ್ದೆ. ಸುಮಾರು 10 ವಾಹನಗಳು ಬರುತ್ತಿವೆ, ಇದರಲ್ಲಿ ಪೊಲೀಸ್ ಇಲಾಖೆಯವರು ಶಾಮಿಲಾಗಿ ತಿಂಗಳಿಗೆ ಇಂತಿಷ್ಟು ಹಣ ಎಂದು ವಸೂಲು ಮಾಡಿಕೊಂಡು ಈ ರೀತಿಯಾಗಿ ಮಾಡುತ್ತಾರೆಂದು ಹೇಳಿ ನಾನು ಪತ್ರವನ್ನು ಬರೆದು ಎಲ್ಲವನ್ನು ಹೇಳಿದರೂ ಸಹ ಏನು ಕ್ರಮವನ್ನು ಇವತ್ತಿನವರೆಗೆ ಜರುಗಿಸಿಲ್ಲ. ಜಿಲ್ಲಾಧಿಕಾರಿಗಳು ರೀಜಿನಲ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ಬರೆದು ಆ ವಾಹನಗಳನ್ನು ನಿಲ್ಲಿಸಬೇಕೆಂದು ಪತ್ರವನ್ನು ಬರೆದಿದ್ದಾರೆ, ಆದರೂ ಅದರ ಬಗ್ಗೆ ಏನು ಕ್ರಮವನ್ನು ಜರುಗಿಸಿಲ್ಲ. ಆ ಸಂದರ್ಭದಲ್ಲಿದ್ದಂಥ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರೀನಿವಾಸ್‌ರವರು ಇಲ್ಲಿಯೇ ಇದ್ದಾರೆ. ಅವರಿಗೂ ಸಹ ನಾನು ಪತ್ರವನ್ನು ಕೊಟ್ಟಿದ್ದೆ, ಅವರು ಕೂಡ ಇದರ

ಬಗ್ಗೆ ಸೂಕ್ತ ಕ್ರಮ ಜರುಗಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿದ್ದರು. ಆದರೂ ಏನೂ ಕ್ರಮ ಆಗಲಿಲ್ಲ. ನಾನು ಹಲವಾರು ಭಾರಿ ಧರಣಿ ಕುಳಿತುಕೊಳ್ಳುತ್ತೇನೆಂದು ಸರ್ಕಾರಕ್ಕೆ ಪತ್ರವನ್ನು ಬರೆದು ಮಾನ್ಯ ಮುಖ್ಯಮಂತ್ರಿಗಳ ಕಛೇರಿಗೆ ಪತ್ರವನ್ನು ತಲುಪಿಸಿದ್ದೇನೆ. ಯಾವುದೇ ಕ್ರಮ ಜರುಗಿಸುತ್ತಿಲ್ಲ. ಹಲವಾರು ಬಾರಿ ನಾನೇ ರಾತ್ರಿ ಮರಳು ಲಾರಿಯನ್ನು ನಿಲ್ಲಿಸಿ ಪೊಲೀಸ್ ಇಲಾಖೆಯವರಿಗೆ ವಹಿಸಿದಂಥ ಸಂದರ್ಭ ಸಹ ಇದೆ. ಒಬ್ಬ ಪೇದೆ ಖುದ್ದಾಗಿ ಹಣ ತೆಗೆದುಕೊಳ್ಳುವುದನ್ನು ಲಾರಿ ಸಮೇತ ಹಿಡಿದುಕೊಟ್ಟರೂ ಸಹ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಆ ಪೇದೆಯನ್ನು ಸಸ್ಪೆಂಡ್ ಮಾಡಿದರೂ ನಂತರ ಅವನನ್ನು ಅಲ್ಲಿಯೇ ಮುಂದುವರೆಸಿದರು. ನಮ್ಮ ಜಿಲ್ಲೆಯ S.P. ಯವರು ಏನಿದ್ದಾರೆ, ಅವರು ಇದರಲ್ಲಿ ಸಂಪೂರ್ಣವಾಗಿ ಶಾಮಿಲಾಗಿದ್ದಾರೆ. ಪೊಲೀಸ್ ಇಲಾಖೆ ಇದರಲ್ಲಿ ಶಾಮಿಲಾಗಿದೆ. ಈ ಮರಳು ದಂಧೆ ಇವತ್ತು ನಮ್ಮ ಕೋಲಾರ ಜಿಲ್ಲೆಯಲ್ಲಿ, ಅದರಲ್ಲೂ ನಮ್ಮ ತಾಲ್ಲೂಕಿನಲ್ಲಿ ನಡೆಯುತ್ತಿದೆ. ಇದರಿಂದ ನಮ್ಮ ರಸ್ತೆಗಳು ಎಲ್ಲಾ ಹದಗೆಟ್ಟು ಹೋಗಿದೆ. ಅಲ್ಲಿನ S.P. ಯವರು ಕೂಡ ಗಮನವನ್ನು ಕೊಡುತ್ತಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲಿಯೇ ಇದ್ದಾರೆ, ದಯವಿಟ್ಟು ಇದರ ಬಗ್ಗೆ ಗಮನವನ್ನು ಕೊಡಬೇಕು. ತಮ್ಮ ಇಲಾಖೆಯ Central Government ಕಾನೂನು ಪ್ರಕಾರ ಲಾರಿಗಳು ಎಷ್ಟು ಟನ್ ಅನ್ನು ಹಾಕಬೇಕು ಎಂದಿದೆ. Single axel vehicles, two axel vehicles, three axel vehicles, multi axel ಇರುವಂಥ ವಾಹನಗಳು ಎಷ್ಟು ಟನ್ ಭಾರವನ್ನು ಸಾಗಾಣಿಕೆ ಮಾಡಬಹುದು ಎಂಬ ಬಗ್ಗೆ ಕಾನೂನು ಇದೆ. ಅಲ್ಲಿ ಬರುವ two axel ಲಾರಿಯ ಕೆಪ್ಯಾಸಿಟಿ ಕೇವಲ 9 ಟನ್, ಆದರೆ ಇವತ್ತು ಅಲ್ಲಿ ಅವರು 25 ಟನ್ ಮರಳು ಸಾಗಾಣಿಕೆ ಮಾಡುತ್ತಾರೆ, ನಮ್ಮ ರೋಡ್ ಕೆಪ್ಯಾಸಿಟಿ ಇರುವುದು ಕೇವಲ 10 ಟನ್ ಮಾತ್ರ. ಜನರಿಂದ ನಾವು ರಸ್ತೆ ಸರಿಯಿಲ್ಲವೆಂದು ಬೈಯಿಸಿಕೊಳ್ಳಬೇಕು. ಅಂತರ್ಜಲ ಕುಸಿಯುತ್ತಿದ್ದು ಇವತ್ತು ಸಾವಿರ ಅಡಿಯವರೆಗೆ ನಮಗೆ ನೀರು ಸಿಗುತ್ತಿಲ್ಲ. ಈಗಾಗಲೇ ಕುಡಿಯಲು ನೀರು ಇಲ್ಲದೇ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ರೈತರ ಅಭಿವೃದ್ಧಿಗೆ ಹಣ ಕೊಡುವುದಿಲ್ಲ. ಪರಿಸರ ನಾಶವಾಗುತ್ತದೆಂದು ಹೇಳಿದರೆ, ಅದಕ್ಕೂ ಕೂಡ ಹಣವನ್ನು ಕೊಡುವುದಿಲ್ಲ. ಇದನ್ನು ನಿಯಂತ್ರಣ ಮಾಡಿ ಎಂದರೆ, ಅದನ್ನು ಮಾಡುತ್ತಿಲ್ಲ. ನಾವು ನಿಯಂತ್ರಣ ಮಾಡಿದರೆ ಪೊಲೀಸ್ ಅಧಿಕಾರಿಗಳು ಹೇಳುತ್ತಾರಂತೆ, ಶಾಸಕರು ಬಹಳ ಒಳ್ಳೆಯ ಕೆಲಸವನ್ನು ಮಾಡಿದರು, ತಿಂಗಳಿಗೆ ಇದರಿಂದ ನಮಗೆ ಇನ್ನು ಹೆಚ್ಚು ಹೆಚ್ಚು income ಬರುತ್ತದೆಂದು ಹೇಳುತ್ತಾರೆ. ಕೊನೆಗೆ ನಮ್ಮ ಹತ್ತಿರ ಅಂಗರಕ್ಷಕ ಇರುತ್ತಾನೆ, ಅವನ ಮೇಲೆ ಒತ್ತಡ ತರುತ್ತಾರೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಖಂಡಿತ ನಮ್ಮ ಜಿಲ್ಲೆಯ ಬಹಳಷ್ಟು ಜನ ತಿಳಿದವರು ಇದರ ಬಗ್ಗೆ

ಹೇಳಿದ್ದಾರೆ. ಸುಮಾರು 20 ವರ್ಷಗಳಲ್ಲಿ ಕೋಲಾರ ಜಿಲ್ಲೆ ಮರಳುಗಾಡು ಆಗುತ್ತದೆ. ದಯವಿಟ್ಟು ಕರ್ನಾಟಕದಲ್ಲಿ ಮರಳುಗಾಡು ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ. ಈಗಾಗಲೇ ನಾವು ಬಹಳಷ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವಂಥದ್ದು, ಸರ್ಕಾರದಿಂದ ಯಾವುದೇ ಒಂದು ಸೌಲಭ್ಯ ನಮಗೆ ಸಿಗುತ್ತಿಲ್ಲ. ಕೆರೆಗಳ ಅಭಿವೃದ್ಧಿ ಏನಾಗುತ್ತಿದೆ, ಅದರಲ್ಲಿ ಕೂಡ ನಮಗೆ ತಾರತಮ್ಯವಾಗುತ್ತಿದೆ. ಇದೆಲ್ಲಾ ಇದಕ್ಕೆ ಪೂರಕವಾಗಿ ಇರುವುದರಿಂದ ಮಾನ್ಯ ಛೇರ್ಮನ್‌ರೆ, ಈ ವಿಷಯವನ್ನು ಹೇಳಬೇಕಾಗುತ್ತದೆ. ಮರಳಿನಲ್ಲಿ ನೀರನ್ನು ಹಿಡಿಯತಕ್ಕಂಥ ಅಂಶವಿದೆ. ಮರಳನ್ನು ಮೂರು ಅಡಿ ತೆಗೆಯಬೇಕೆಂದು ಕಾನೂನು ಇದೆ. ಇವತ್ತು ಸುಮಾರು 25–30 ಅಡಿಯವರೆಗೆ ತೆಗೆದಿದ್ದಾರೆ. ಮಳೆ ಬಂದಾಗ ಇವತ್ತು ಎಲ್ಲಾ ಆಂಧ್ರಕ್ಕೆ ಹೋಗುತ್ತದೆ. ಚೆಕ್‌ಡ್ಯಾಂ ಕೇಳಿದರೆ ಅದಕ್ಕೆ ನಮಗೆ ಹಣ ಕೊಡುವುದಿಲ್ಲ. ನಾವು ಅಲ್ಲಿ ಯಾವ ರೀತಿಯಾಗಿ ಬದುಕಬೇಕು ಹೇಳಿ. ನಾವು ಯಾವ ರೀತಿಯಾಗಿ ಅಂತರ್ಜಲವನ್ನು ವೃದ್ಧಿ ಮಾಡಬೇಕು. ಒಂದು ಕಡೆ ಪರಿಸರವನ್ನು ನಾಶ ಮಾಡುವುದಕ್ಕೆ ಬಿಡುತ್ತಿದ್ದೀರಿ. ನಮಗೆ ಅದಕ್ಕೆ ಪೂರಕವಾದ ಒಂದು ವ್ಯವಸ್ಥೆ ಇಲ್ಲ. ರೈತರ ಅಕ್ರಮ ಸಕ್ರಮದ ಟಿ.ಸಿ.ಯ ಬಗ್ಗೆ ಕೇಳಲು ಹೋದಾಗ ನಿಮ್ಮದು ಡಾರ್ಕ್ ಏರಿಯಾ ಇದೆ, ಅವರಿಂದ ಹಣವನ್ನು ಪಡೆಯಬೇಡಿ ಎಂದು ಹೇಳುತ್ತಾರೆ. ಯಾರ ಹತ್ತಿರವೂ application ತೆಗೆದುಕೊಳ್ಳಬೇಡಿ ಎಂದು ಹೇಳುತ್ತಾರೆ. ನೀವು ನಮಗೆ ಒಂದು ಕಡೆ ನೋಡಿದರೆ ಸಹಾಯ ಮಾಡುವುದಿಲ್ಲ. ಅಲ್ಲಿ ಬೋರ್‌ವೆಲ್ ಹಾಕುವುದಕ್ಕೆ ಹೋದರೆ ಬ್ಯಾನ್ ಮಾಡುತ್ತಾರೆ. ನಿಮ್ಮ ಉತ್ತರವನ್ನು ನೋಡಿದಾಗ ಒಂದೊಂದು ವರ್ಷದಲ್ಲಿ ಒಂದೊಂದು ರೀತಿಯಾದಂಥ ಉತ್ತರವನ್ನು ಕೊಟ್ಟಿದ್ದೀರಿ. ಚೆಕ್‌ಪೋಸ್ಟ್ ನಿರ್ಮಾಣ ಮಾಡಿದ್ದೇವೆಂದು 2005 ರಲ್ಲಿ ಹೇಳುತ್ತಾರೆ. 2007 ರಲ್ಲಿ ಒಂದು ರೀತಿಯಾದಂಥ ಉತ್ತರವನ್ನು ಕೊಡುತ್ತಾರೆ. ಸರ್ಕಾರ ಇದರ ಬಗ್ಗೆ ಸರಿಯಾದ ಕ್ರಮ ಜರುಗಿಸುತ್ತದೋ ಇಲ್ಲವೋ ಎನ್ನುವುದನ್ನು ಹೇಳಬೇಕು ಅಥವಾ ನಾವು ಜನರ ಜೊತೆ ಬೀದಿಗೆ ಇಳಿಯಬೇಕಾ ಎನ್ನುವುದರ ಬಗ್ಗೆ ದಯವಿಟ್ಟು ಹೇಳಬೇಕು.

**ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–** ಮಾನ್ಯ ಛೇರ್ಮನ್‌ರೆ, ಮಾನ್ಯ ಶಾಸಕರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅನೇಕ ಕಡೆಗೆ ಅಧಿಕಾರಿಗಳು ತಮ್ಮ ಜವಾಬ್ದಾರಿಯಿಂದ ನುಣಿಚಿಕೊಂಡರೆ ಇಂತಹ ಸಮಸ್ಯೆಗಳು ಉದ್ಭವವಾಗುತ್ತವೆ. ಒಂದು ಮಾತನ್ನು ಹೇಳುವುದಕ್ಕೆ ಈ ಸದನದಲ್ಲಿ ನಾನು ಇಚ್ಛಿಪಡುತ್ತೇನೆ. ಕೋಲಾರ ಜಿಲ್ಲೆಯಲ್ಲಿ ನದಿಯಿಂದ ಮರಳನ್ನು ತೆಗೆಯುವುದನ್ನು ನಿಲ್ಲಿಸಬೇಕೆಂದು ಒಂದು ತೀರ್ಮಾನವಾಗಬೇಕಾಗಿದೆ. ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕರೆಸಿ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಾಡುತ್ತಾರೆ. ಕೋಲಾರ ಜಿಲ್ಲೆಯಲ್ಲಿಯ ನದಿಗಳ ಬಗ್ಗೆ

ಮಾನ್ಯ ಸುಧಾಕರ್‌ರವರು ಹೇಳಿದಂತೆ, ಸಿಕ್ಕಾಪಟ್ಟೆ ಮರಳು ತೆಗೆಯುವುದರಿಂದ ನೀರು ನಿಲ್ಲುವುದಿಲ್ಲ. ಈ ರೀತಿಯಾಗುತ್ತದೆ. ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಮತ್ತು ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಪೊಲೀಸ್ ಇಲಾಖೆಯ ಮೇಲಾಧಿಕಾರಿಗಳಾದ DG ಯವರಿಗೆ ಹೇಳಿ, ಯಾವುದೇ ರೀತಿಯ ಇಂತಹ ವ್ಯವಹಾರವನ್ನು ಮಾಡಬಾರದೆಂದು ಹೇಳಿ ನಿರ್ದೇಶನವನ್ನು ಸ್ಪಷ್ಟವಾಗಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

**7–00 ಗಂಟೆ**

**ಡಾ॥ ಎಂ.ಸಿ. ಸುಧಾಕರ್ :–** ಕೊನೆಯದಾಗಿ ಹೇಳಿಬಿಡುತ್ತೇನೆ, ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿ ಕಂಚಾರನಳ್ಳಿ ಪೊಲೀಸ್ ಠಾಣೆ ಇದೆ, ಅಲ್ಲಿ ನಾನು ಬಹಳಷ್ಟು ಸಲ ಹೇಳಿದ್ದೇನೆ. ಮೊನ್ನೆ ಬಹಳಷ್ಟು ಜನ ರೈತರು ರಾತ್ರಿ ಹೊತ್ತು ಕಾದು 3.00 ಗಂಟೆ, 4.00 ಗಂಟೆಯಲ್ಲಿ ವಾಹನಗಳನ್ನುಯ ತಡೆದಿಟ್ಟರೂ ಪೊಲೀಸಿನವರು ಬಂದು ಬಿಡಿಸುತ್ತಿದ್ದಾರೆ, ದಯವಿಟ್ಟು ಆ ಕಂಚಾರನಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತನಿಖೆ ಮಾಡಿ ಆ ಸಬ್ ಇನ್ಸ್‌ಪೆಕ್ಟರ್ ಮೇಲೆ ತಾವು ಕ್ರಮ ಜರುಗಿಸಬೇಕು. ಇಲ್ಲದಿದ್ದರೆ ಅವರೇ ಅದಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ, ಪಕ್ಕದ ಶಿಡ್ಲಘಟ್ಟದ ಮುಖಾಂತರ ಅದನ್ನು ಕಳುಹಿಸಿಕೊಡುತ್ತಿದ್ದಾರೆ, ದಯವಿಟ್ಟು ಆ ಸಬ್‌ಇನ್ಸ್‌ಪೆಕ್ಟರ್ ಮೇಲೆ ಕ್ರಮ ಜರುಗಿಸಬೇಕು.

**ಶ್ರೀ ಬಸವರಾಜ್.ಎಸ್. ಹೊರಟ್ಟಿ :–** ಮಾನ್ಯ ಸದಸ್ಯರು ಹೇಳುವುದು ಬಹಳ ಸೂಕ್ತವಾಗಿದೆಯೆಂದು ಸರ್ಕಾರ ಒಪ್ಪಿಕೊಂಡಿದೆ. ಈ ದೃಷ್ಟಿಯಲ್ಲಿ ಅವರು ಹೇಳುತ್ತಿರುವಂತೆ ಸಂಬಂಧಪಟ್ಟಂತೆ ಪೊಲೀಸ್ ಅಧಿಕಾರಿ ತಪ್ಪು ಮಾಡಿದ್ದರೆ ತಕ್ಷಣ ಅವರಲ್ಲಿದ್ದಂಥ ಎಲ್ಲಾ ಕಾಗದಪತ್ರಗಳನ್ನು ತರಿಸಿ, ಅವರ ಮೇಲಾಧಿಕಾರಿಗಳಿಗೆ ತಿಳಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಿಳಿಸುವಂಥ ಪ್ರಯತ್ನವನ್ನು ಮಾಡುತ್ತೇವೆ.

**2) <u>ವಿಷಯ : ಕುಣಿಗಲ್‌ನಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ.</u>**

**ಶ್ರೀ ಹೆಚ್. ಲಿಂಗಪ್ಪ (ಕುಣಿಗಲ್) :–** ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕುಣಿಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವ ಬಹಳ ಇದೆ. ಬೋರ್‌ವೆಲ್‌ಗಳಿಂದ ನೀರನ್ನು ಮೂಲವಾಗಿಟ್ಟುಕೊಂಡು ಕುಡಿಯುವ ನೀರು ಕೊಡತಕ್ಕಂಥದ್ದು ವಾರಕ್ಕೆ ಎರಡು ದಿವಸ ಮೂರು ದಿವಸ ಮಾತ್ರ ಸರಬರಾಜು ಮಾಡತಕ್ಕಂಥ ಒಂದು ಪರಿಸ್ಥಿತಿ ಇದೆ. ಅದಕ್ಕೆ ಕುಡಿಯುವ ನೀರಿನ ಯೋಜನೆ ಇವತ್ತು ನಗರ ನೀರು ಸರಬರಾಜು.

**(ಗೊಂದಲ)**